SN – 097

III Semester B.A./B.H.M. Examination, Nov./Dec. 2013
(Repeaters Scheme)
(Prior to 2011-12)
ಕನ್ನಡ ಭಾಷಾ (ಪತ್ರಿಕೆ – III)
ಹೊಸಗನ್ನಡ ಕವಿತೆ, ವಿಚಾರ ಸಾಹಿತ್ಯ

Time : 3 Hours Max. Marks : 90

I. ಅ) ಒಂದರ ಭಾವಾರ್ಥವನ್ನು ವಿವರಿಸಿ : **(1×5=5)**

1) ಪಡುವ ದಿಬ್ಬದ ಗೌಡನೊಬ್ಬನು
ಬಿಡದೆ ತೊರೆಯನ ಕೂಗಿಕೊಂಡನು ;
ತಡೆಯದೀಗಲೆ ಗಡುವ ಹಾಯಿಸು,
ಕೊಡುವೆ ಕೇಳಿದ ಹೊನ್ನನು.

2) ಪ್ರೀತಿ ಇಲ್ಲದ ಮೇಲೆ
ಮಾತಿಗೆ ಮಾತು ಕೂಡೀತು ಹೇಗೆ ?
ಅರ್ಥ ಹುಟ್ಟೀತು ಹೇಗೆ ?
ಬರಿ ಪದಕ್ಕೆ ಪದ ಜತೆಗಿದ್ದ ಮಾತ್ರಕ್ಕೆ
ಪದ್ಯವಾದೀತು ಹೇಗೆ ?

ಆ) ಮೂರಕ್ಕೆ ಸಂದರ್ಭ ಸಹಿತ ವಿವರಿಸಿ. **(3×3=9)**

1) ಈಕೆ ಮೇರಿಯೂ ಅಲ್ಲ, ಹುಟ್ಟಿದ್ದು ಏಸುವಲ್ಲ.
2) ರಾಜ್ಯವಾಳುವ ಯೋಗ ನಿನಗುಂಟು ಕೆಂಪಣ್ಣ.
3) ಜಾರ ಕೃಷ್ಣನ ಕಥೆಗೆ ಕೋಡು ಮೂಡಿತ್ತು !
4) ಮುಲುಗುವುವು ರಾಗಗಳು; ತೇಕುವುವು ಹಸಿವೆಗಳು
5) ಯಾರಲಾ ಯಾರಲಾ, ನೆಲದ ವಾರಸು ಯಾರಲಾ ?
6) ಹತ್ತಿ ಕುದುರೆಯ ತರುಬಿ ಬರುವರು
ಮುತ್ತಿಕೊಂಡರೆ ನನ್ನ ಕೊಲುವರು

ಇ) ಮೂರು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(3×2=6)**

ಬಿ.ಎಂ.ಶ್ರೀ., ದಲಿತ ಕಾವ್ಯ, ರಂಜಾನ್ ದರ್ಗಾ, ಕೆಂಪೇಗೌಡ, ಕಥನ ಕಾವ್ಯ, ಬರಗೂರು ರಾಮಚಂದ್ರಪ್ಪ.

P.T.O.

http://www.onlinebu.com



II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(4×5=20)**

1) ಪುಟ್ಟವಿಧವೆಯ ಬದುಕಿನ ದಾರುಣತೆಯೇನು ?
2) 'ನನ್ನ ನುಡಿ' ಕವಿತೆಯ ಆಶಯವೇನು ?
3) ಪ್ರೀತಿಯ ಅನನ್ಯತೆಯನ್ನು 'ಪ್ರೀತಿ ಇಲ್ಲದ ಮೇಲೆ' ಕವನ ಹೇಗೆ ನಿರೂಪಿಸಿದೆ ?
4) 'ಗಿಡುಗ ಮತ್ತು ಎರೆಹುಳು' ಕವಿತೆಯಲ್ಲಿ ಜಾಗತೀಕರಣದ ಚಿತ್ರವು ಹೇಗೆ ನಿರೂಪಿತವಾಗಿದೆ ?
5) 'ಬಣ್ಣದ ಹುಳು' ಕವಿತೆಯಲ್ಲಿ ವ್ಯಕ್ತವಾಗಿರುವ ವಾತ್ಸಲ್ಯಭಾವ ಎಂಥದ್ದು ?
6) 'ಕತ್ತಲೆ ಬೆಳದಿಂಗಳೊಳಗ' ಕವಿತೆಯಲ್ಲಿ ಜಾತಿಭೇದದ ಭಾವನೆಯು ಹೇಗೆ ವಿಡಂಬನೆಗೊಂಡಿದೆ ?

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ : **(2×10=20)**

1) 'ಬಲಿಪಾಡ್ಯಮಿ' ಕವಿತೆಯಲ್ಲಿ ಬಲಿ ಚಕ್ರವರ್ತಿ ಪರವಾದ ಅನುಕಂಪ ಹೇಗೆ ವ್ಯಕ್ತವಾಗಿದೆ ? ವಿವರಿಸಿ.
2) ಸಿದ್ದಲಿಂಗಯ್ಯನವರ 'ಬೆಂಗಳೂರಿನ ಹಾಡು', ರಂಜಾನ್ ದರ್ಗಾರ 'ಸದಾ ನಿಮ್ಮೊಡನೇ ಇರುವೆ', ದೊಡ್ಡರಂಗೇಗೌಡರ 'ಹೆಜ್ಜೆ ಗುರುತು' – ಇವುಗಳಲ್ಲಿ ಎರಡರ ಭಾವವನ್ನು ವಿವರಿಸಿ.
3) 'ಕಾರಿ ಹೆಗ್ಗಡೆಯ ಮಗಳು' ಕವಿತೆಯ ಸ್ವಾರಸ್ಯವನ್ನು ವಿವರಿಸಿ.
4) 'ಬಳೆಗಾರನ ಹಾಡು' ಕವಿತೆಯಲ್ಲಿ ವ್ಯಕ್ತವಾಗಿರುವ ಸ್ತ್ರೀ ಪರವಾದ ನಿಲುವನ್ನು ಕುರಿತು ಬರೆಯಿರಿ.

IV. ಐದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : **(5×1=5)**

1) ಕಲೆಯನ್ನು ವಶೀಕರಣ ಮಾಡಿಕೊಂಡಿರುವುದಕ್ಕೆ ಪರಮ ಸಾಕ್ಷಿ ಯಾವುದು ?
2) ಡಾ. ಬಿ. ಆರ್. ಅಂಬೇಡ್ಕರ್ ಬರೆದ ಲೇಖನದ ಹೆಸರೇನು ?
3) ಗಾಂಧೀಜಿ ಬರೆದ ಪುಸ್ತಕ ಯಾವುದು ?
4) ಚಾತುರ್ವರ್ಣ ವ್ಯವಸ್ಥೆ ಇರುವ ದೇಶ ಯಾವುದು ?
5) ಫುಕುವೋಕಾ ಯಾವ ದೇಶದವನು ?
6) ಮೆಕಾಲೆ ಯಾರು ?
7) ಎಂ. ಎನ್. ಶ್ರೀನಿವಾಸ್ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಹಳ್ಳಿ ಯಾವುದು ?

V. ಒಂದನ್ನು ಕುರಿತು ವಿಮರ್ಶಾತ್ಮಕ ಟಿಪ್ಪಣಿ ಬರೆಯಿರಿ : **(1×5=5)**

1) ಸ್ತ್ರೀಯರನ್ನು ಕುರಿತ ಆಲೋಚನೆಗಳು 'ಲಿಂಗತಾರತಮ್ಯದ ಸ್ವರೂಪ' ಲೇಖನದಲ್ಲಿ ಹೇಗೆ ವ್ಯಕ್ತವಾಗಿವೆ ?
2) ಫುಕುವೋಕಾನ ಕೃಷಿ ವಿಧಾನದ ಬಗ್ಗೆ ಲೇಖಕರ ಅಭಿಪ್ರಾಯವೇನು ?

VI. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : **(2×10=20)**

1) 'ಪ್ರೀತಿಸುವುದು ಒಂದು ಕಲೆಯೇ' ? ಲೇಖನದ ಹಿನ್ನೆಲೆಯಲ್ಲಿ ವಿಚಾರ ಮಾಡಿ.
2) ಜನಾಂಗಭೇದದ ಬಗೆಗೆ ದೇವನೂರ ಮಹಾದೇವರ ನಿಲುವುಗಳೇನು ? ವಿವರಿಸಿ.
3) ದೇಶಿ ಶಿಕ್ಷಣ ಪದ್ಧತಿಯ ನಾಶದ ಪರಿಣಾಮಗಳೇನು ? 'ಮೆಕಾಲೆಯ ಮಕ್ಕಳು' ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.
4) ಮತಾಂತರದ ಬಗ್ಗೆ ಅಂಬೇಡ್ಕರ್‌ರ ವಿಚಾರಗಳನ್ನು ಸಂಗ್ರಹಿಸಿ ಬರೆಯಿರಿ.

www.onlinebu.com

http://www.onlinebu.com http://www.onlinebu.com

http://www.onlinebu.com



**SN – 097**

**III Semester B.A./B.H.M. Examination, November/December 2013**
**(Repeaters) (Prior to 2010-11 Scheme)**
**ಕನ್ನಡ ಭಾಷಾ (ಪತ್ರಿಕೆ – III)**
**ಸಾಹಿತ್ಯ ಸಂವಾದ – ೨**
**(ಹಳೆಯ ವಿದ್ಯಾರ್ಥಿಗಳಿಗಾಗಿ 2010-11)**

Time : 3 Hours　　　　Max. Marks : 90

**ಭಾಗ – 1**

I. ಅರ್ಥ ಮತ್ತು ಧ್ವನಿ ಬದಲಾಗದಂತೆ ಮೂರು ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ. **(3×2=6)**

1) ನಿನ್ನ ಟ್ರೈನ್ ಟಿಕೇಟ್ ರಿಝರ್ವ್ ಆಗಿದೆ ಕಲಕತ್ತಾ ಮೇಲ್‌ಗೆ.

2) ಹದಿನೇಳು ವರ್ಷದ ಶ್ರಮದ ಫಲ ಇದು ನಾನೇ ಕಂಡು ಹಿಡಿದಿದ್ದು.

3) ಅಪ್ಪನನ್ನು ತಾನು ಪ್ರೀತಿಸುತ್ತಿದ್ದೆನೋ ಇಲ್ಲವೊ ಅವನಿಗೆ ನೆನಪಿಲ್ಲ.

4) ಆ ವಸಂತದೊಳಗೊಮ್ಮೆ ಮಾದ್ರಿದೇವಿ ವನದೊಳಗಾಡುತಿರ್ದಳು.

II. ಅರ್ಥವತ್ತಾದ ಕ್ರಮದಲ್ಲಿ ಮೂರು ವಾಕ್ಯಗಳನ್ನು ಪುನರ್ರಚಿಸಿ. **(3×2=6)**

1) ಮಧ್ಯಾಹ್ನದ ಇರಬೇಡ ತನಕ ಊರಲ್ಲಿ ಮಧ್ಯಸ್ತರಿಲ್ಲದ.

2) ಸಾವುಗಳಿಂದ ಭೂಕ್ಷಣ ಬರುವುದೇ ಮನೆಗೆ.

3) ತಲೆಗೊಂದು ಸಾಕು ಸುಮ್ಮಿರ್ರಪ್ಪೊ ಮಾತ್ಯಾಕೆ.

4) ಇರುತ್ತದೆ ಮತಿ ಸ್ವಲ್ಪವಾಗಿಯೇ ಮನುಷ್ಯರೆಲ್ಲರಲ್ಲಿಯೂ ಹೆಚ್ಚಾಗಿಯೇ

III. ಉಪಮೆ–ರೂಪಕಗಳನ್ನು ಬಳಸಿ ಮೂರು ಸ್ವಂತ ವಾಕ್ಯಗಳನ್ನು ರಚಿಸಿ. **(3×2=6)**

1) ಗಾಳಿಗೊಡ್ಡಿದ ದೀಪಾಂಕುರದಂತೆ

2) ಇಂದುಮುಖಿ

3) ಆಕಾಶಗಂಗೆ

4) ಪುರುಷ ಸಿಂಹ

IV. ಮೂರು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ. **(3×2=6)**

1) ಕುಶಾಲು ಹೋಗಿ ಅಸಲಾಯಿತು

2) ಪಾಪಿಜನ್ಮ ನಂದು

3) ಆಕಾಶಕ್ಕೆ ಏಣಿ ಹಾಕು

4) ಎಳ್ಳುನೀರು ಬಿಡು

http://www.onlinebu.com



V. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ. (2×3=6)

1) ಕಾರ್ಯವಾಸಿ ಕತ್ತೆಕಾಲು ಕಟ್ಟು

2) ಕೈಕೆಸರಾದರೆ ಬಾಯಿ ಮೊಸರು

3) ಅತಿ ಆಸೆ ಗತಿಗೇಡು

4) ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ

## ಭಾಗ – 2

I. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆಯ ಹಿನ್ನೆಲೆಯಲ್ಲಿ ಉತ್ತರಿಸಿ. (4×5=20)

1) ಸಾವಿಲ್ಲದ ಮನೆ ಮತ್ತು ಸಾವಿನ ಬಗ್ಗೆ ಗೌರವವಿಲ್ಲದ ಮನುಷ್ಯ ಇವರನ್ನು ಕುರಿತು ಲೇಖಕರ ದೃಷ್ಟಿಕೋನ ಯಾವುದು ?

2) 'ಟೊಳ್ಳು ಗಟ್ಟಿ' ನಾಟಕದಲ್ಲಿ ಬರುವ ಯಾವುದಾದರೂ ಎರಡು ಪಾತ್ರಗಳನ್ನು ಪರಿಚಯಿಸಿ.

3) ''ಮತ ನಮಗೊಂದು ದೊಡ್ಡ ಬಂಧನವಾಗಿದೆ'' ಈ ಹೇಳಿಕೆಯನ್ನು 'ಆತ್ಮಶ್ರೀಗಾಗಿ ನಿರಂಕುಶ ಮತಿಗಳು' ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

4) 'ಧರಣಿ ಪತಿ:ಮಹಾರಾಣಿ ದೊರೆಗಳು' ಈ ಸಾಲಿನ ವಿಶಿಷ್ಟತೆಯನ್ನು ವಿವರಿಸಿ.

5) ವಸಂತನ ಆಗಮನ ಪಾಂಡುವಿನ ಸಾವಿಗೆ ಮೃತ್ಯುವಾಗಿ ಪರಿಣಮಿಸಿದ್ದು ಹೇಗೆ ವಿವರಿಸಿ.

6) ಲೈಂಗಿಕತೆಯನ್ನು ಕುರಿತಂತೆ ರೂಢಿಗತವಾಗಿರುವ ತಪ್ಪು ಕಲ್ಪನೆಗಳನ್ನು ವಿವರಿಸಿ.

## ಭಾಗ – 3

I. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿ. (2×10=20)

1) ಮಹಾಶ್ವೇತೆ ಮತ್ತು ಪುಂಡರೀಕ ಭೇಟಿಯಾದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

2) ವೈಜ್ಞಾನಿಕ ಶೋಧನೆಗಳು ಲಾಭದಾಯಕ ಉದ್ದಿಮೆಗಳಾದ ಬಗೆ ಹೇಗೆ 'ಗೆಲಿಲಿಯೋ' ನಾಟಕದ ಹಿನ್ನೆಲೆಯಲ್ಲಿ ಚರ್ಚಿಸಿ.

3) ಆಧುನಿಕ ವಿಜ್ಞಾನವು ವರವೋ ? ಶಾಪವೋ ? ವಿಮರ್ಶಿಸಿ.

## ಭಾಗ – 4

I. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. (2×10=20)

1) ನೀಲಾಂಜನೆಯ ನೃತ್ಯವು ಆದಿನಾಥನಿಗೆ ಮೋಕ್ಷಕ್ಕೆ ಹಾದಿಯಾದ ರೀತಿಯನ್ನು ವಿವರಿಸಿ.

2) ರಸ್ತೆ ಹಣ ದೇವಾಲಯ ರಿಪೇರಿಗೆ ಬಳಕೆಯಾಗುವುದನ್ನು ಹುಡುಗರು ವಿರೋಧಿಸುತ್ತಾರೆ ಏಕೆ ? ವಿವರಿಸಿ.

3) ''ಬದುಕು ಸಾವಿನೆಡೆಗಿನ ಸತತ ಪ್ರಯಾಣ'' ಈ ಹೇಳಿಕೆಯನ್ನು 'ಪಯಣ' ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

———————

http://www.onlinebu.com http://www.onlinebu.com